353

**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೇಂಟ್\ಉಪಲೋಕ್\ಬಿಡಿ\81\2018\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 05/08/2019

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯು:** ಸರ್ಕಾರಿ ನೌಕರರಾದ ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕ್ ನೆಲವಂಕಿ ಗ್ರಾಮ ಪಂಚಾಯತ್‌ನ 1) ಅಧ್ಯಕ್ಷರಾಗಿದ್ದ ಶ್ರೀಮತಿ.ರತ್ನಮ್ಮ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿದ್ದ 2) ಶ್ರೀ.ಶಂಕರಪ್ಪ, 3)ಶ್ರೀ.ಪಿ.ಎನ್.ಮುರಳಿಮೋಹನ್, 4) ಶ್ರೀ.ಆರ್.ರವಿಚಂದ್ರ ಮತ್ತು 5)ಪಿ.ವಿ.ವಿಶ್ವನಾಥ ರೆಡ್ಡಿ ರವರುಗಳ ದುರ್ನಡತೆಯ ಬಗ್ಗೆ.

**********

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕ್ ಚೇಳೂರು ಯೋಬಳಿ ಪುಲಗಲ್ಲು ಅಂಚೆ ಊದವಾರಪಲ್ಲಿ ಗ್ರಾಮ ನಿವಾಸಿಯಾದ ಶ್ರೀ.ವಿ.ರಾಮಕೃಷ್ಣಪ್ಪ ಬಿನ್ ಲೇಟ್.ಆಂಜನೇಯಲು (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕ್ ನೆಲವಂಕಿ ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ.ಸೋಮಶೇಖರ (ಇನ್ನು ಮುಂದೆ '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

13ನೇ ಹಣಕಾಸು ಯೋಜನೆ ಅಡಿ ದಿ:01/01/13 ರಿಂದ 30/01/2014 ರವರೆಗೆ ಎಷ್ಟು ಹಣ ಬಂದಿದೆ? ಬಂದಿರುವ ಹಣವನ್ನು ಯಾವ ಕಾಮಗಾರಿಗಳಿಗೆ ಖರ್ಚು ಮಾಡಿದೆ? ಕ್ರಿಯಾ ಯೋಜನೆ, ಬ್ಯಾಂಕ್ ಫಾರ್ ಶೀಟ್, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ಕೇಳಿದಾಗ್ಯೂ ಎದುರುದಾರರು ಬ್ಯಾಂಕ್ ಫಾರ್ ಶೀಟನ್ನು ಮಾತ್ರ ಕೊಟ್ಟಿದ್ದಾರೆ. ಆದರೆ, ಇದಕ್ಕೆ ಸಂಬಂಧಿಸಿದ ನಗದು ವಹಿ ಮತ್ತು ವೋಚರ್‌ಗಳನ್ನು ನೀಡಿಲ್ಲ. ದಾಖಲೆಗಳನ್ನು ನೀಡಿದರೆ ಅಕ್ರಮ ಬಯಲಿಗೆ ಬರುತ್ತದೆಂದು ದಾಖಲೆಗಳನ್ನು ಗೌಪ್ಯವಾಗಿ ಇರಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆಯೆಂದು ಹೇಳಿದ್ದಾರೆ.

35.4



3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ದೂರುದಾರರು ಕೋರಿರುವ ದಾಖಲೆಗಳ ಪೈಕಿ, ಕಛೇರಿಯಲ್ಲಿ ಲಭ್ಯವಿದ್ದ ಬ್ಯಾಂಕ್ ಪಾಸ್ ಶೀಟನ್ನು ದೂರುದಾರರಿಗೆ ಸಕಾಲದಲ್ಲಿ ನೀಡಿ, ಸ್ವೀಕೃತಿ ಪಡೆದಿದ್ದು, ತಾವು ದಿನಾಂಕ:06/01/17ರಂದು ಚಲ್ದಿಗಾನಹಳ್ಳಿ ಗ್ರಾಮ ಪಂಚಾಯತ್‌ಗೆ ಹಾಗೂ ನಂತರ ಕೋಲಾರ ತಾಲ್ಲೂಕಿನ ಕೋಳೂರು ಗ್ರಾಮ ಪಂಚಾಯತ್‌ಗೆ ವರ್ಗಾವಣೆಗೊಂಡು ಪ್ರಸ್ತುತ ಅಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದು, ದೂರುದಾರರು ಕೋರಿರುವ ಮಾಹಿತಿಯನ್ನು ತುರ್ತಾಗಿ ನೀಡಲು ನೆಲವಂಕಿ ಗ್ರಾಮ ಪಂಚಾಯತ್‌ನ ಈಗಿನ ಅಭಿವೃದ್ಧಿ ಅಧಿಕಾರಿಯವರಿಗೆ ದಿ:03/02/18ರ ಪತ್ರದ ಮೂಲಕ ಕೋರಿದೆ. ದೂರಿನಲ್ಲಿ ಆರೋಪಿಸಿರುವ ಅಂಶಗಳು ಸತ್ಯಕ್ಕೆ ದೂರವಾಗಿದ್ದು, ದೂರುದಾರರು ಮಾಹಿತಿ ಕೋರಿರುವ ಅವಧಿಯಲ್ಲಿ ತಾವು ಸದರಿ ಪಂಚಾಯತ್‌ನಲ್ಲಿ ಕರ್ತವ್ಯ ನಿರ್ವಹಿಸಿಲ್ಲವೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ಎದುರುದಾರರು ಕಳುಹಿಸಿರುವ ಮಾಹಿತಿಯಲ್ಲಿ ಅನುದಾನಗಳಿಗೆ ಖರ್ಚು ಮಾಡಿರುವ ವೋಚರ್‌ಗಳನ್ನು ನೀಡಿಲ್ಲ, ಬ್ಯಾಂಕ್ ಫಾರ್ ಶೀಟ್ ಪ್ರಕಾರ 13ನೇ ಹಣಕಾಸು ಯೋಜನೆ ಅಡಿ ಸರ್ಕಾರದಿಂದ ಪಂಚಾಯತ್‌ಗೆ ದಿ:01/01/13 ರಿಂದ 30/04/14 ರವರೆಗೆ ₹32,77,262/–ಗಳು ಜಮಾ ಆಗಿದ್ದು, ಸದರಿ ಹಣ ಪೂರ್ತಿ ಖರ್ಚಾಗಿದೆಯೆಂದು ಕಂಡು ಬಂದಿದೆ. ಸದರಿ ಖರ್ಚಿಗೆ ಸಂಬಂಧಪಟ್ಟ ವೋಚರ್‌ಗಳನ್ನು ಎದುರುದಾರರಿಂದ ಪಡೆದುಕೊಂಡು ಅವುಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ವಿಸ್ತೃತ ವರದಿಯನ್ನು ತಾವು ನೀಡಲು ಬಯಸುವುದಾಗಿ ಹೇಳಿದ್ದಾರೆ.

5. ದೂರಿಗೆ ಸಂಬಂಧಿಸಿದ ಪ್ರಶ್ನಿತ ಹಣದ ಅವ್ಯವಹಾರ ಸಮಯದಲ್ಲಿ ಕಾರ್ಯನಿರ್ವಹಿಸಿದ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ.ರತ್ನಮ್ಮ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ.ಶಂಕರಪ್ಪ, ಶ್ರೀ.ಪಿ.ಎನ್.ಮುರಳಿಮೋಹನ್, ಶ್ರೀ.ಆರ್.ರವಿಚಂದ್ರ ಮತ್ತು ಶ್ರೀ.ಪಿ.ವಿ.ವಿಶ್ವನಾಥ ರೆಡ್ಡಿ ರವರುಗಳನ್ನು 2 ರಿಂದ 6ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರುಗಳಿಂದ ದೂರಿಗೆ ಆಕ್ಷೇಪಣೆಗಳನ್ನು ಕೇಳಲಾಗಿ, 2ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

BD/81/18

355



6. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿನಾಂಕ:01/01/13 ರಿಂದ 28/06/13 ರವರೆಗೆ ನೆಲವಂಕಿ ಗ್ರಾಮ ಪಂಚಾಯತ್‌ನಲ್ಲಿ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿರುವುದಾಗಿ ಹೇಳಿ, ದಾಖಲೆಗಳನ್ನು ಸಲ್ಲಿಸಿದ್ದಾರೆ.

7. ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ನೆಲವಂಕಿ ಗ್ರಾಮ ಪಂಚಾಯತ್‌ನಲ್ಲಿ ದಿ:28/06/13 ರಿಂದ 11/10/13 ರವರೆಗೆ ಕಾರ್ಯನಿರ್ವಹಿಸಿದ್ದು, ತಾವು ಯಾವುದೇ ಅವ್ಯವಹಾರವನ್ನು ಮಾಡಿಲ್ಲವೆಂದು ಹೇಳಿದ್ದಾರೆ.

8. ಐದನೇ (5ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ನೆಲವಂಕಿ ಗ್ರಾಮ ಪಂಚಾಯತ್‌ನಲ್ಲಿ ದಿ:30/08/13 ರಿಂದ 30/11/13 ರವರೆಗೆ ಕಾರ್ಯನಿರ್ವಹಿಸಿದ್ದು, ತಾವು ಯಾವುದೇ ಅವ್ಯವಹಾರವನ್ನು ಮಾಡಿಲ್ಲವೆಂದು ಹೇಳಿದ್ದಾರೆ.

9. ಆರನೇ (6ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿನಾಂಕ:01/12/13 ರಿಂದ 31/01/14 ರವರೆಗೆ ನೆಲವಂಕಿ ಗ್ರಾಮ ಪಂಚಾಯತ್‌ನಲ್ಲಿ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿರುವುದಾಗಿ ಹೇಳಿ, ದಾಖಲೆಗಳ ಪ್ರತಿಗಳನ್ನು ಸಲ್ಲಿಸಿದ್ದಾರೆ.

10. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕ್ ನೆಲವಂಕಿ ಗ್ರಾಮ ಪಂಚಾಯತ್‌ನ ಬ್ಯಾಂಕ್ ಖಾತೆಗಳು ಪಂಜಾಬ್ ನ್ಯಾಷನಲ್ ಬ್ಯಾಂಕ್, ಕಶೆಟ್ಟಿಪಲ್ಲಿ ಶಾಖೆ (ಖಾತೆ ಸಂ:2890000100034829) ಇದೆಯೆಂದು ಮತ್ತು ಸದರಿ ಪಂಚಾಯತ್‌ಗೆ 13ನೇ ಹಣಕಾಸು ಯೋಜನೆ ಅಡಿ ಸರ್ಕಾರದಿಂದ ಅನುದಾನವು ಜಮಾ ಆಗಿರುವುದು ಬ್ಯಾಂಕ್ ತಃಖ್ತೆಯಲ್ಲಿ ಕಂಡು ಬಂದಿದೆ. ದೂರಿನಲ್ಲಿ ಹೇಳಿರುವ ಅವಧಿಯಲ್ಲಿ ಸದರಿ ಖಾತೆಯಿಂದ ಖರ್ಚಾದ ಹಣದ ವಿವರ ಈ ಕೆಳಗಿನಂತಿದೆ –

35'6



| ಕ್ರ.ಸಂ. | ಚೆಕ್ ಸಂಖ್ಯೆ | ದಿನಾಂಕ | ಮೊತ್ತ ₹ಗಳಲ್ಲಿ |
|---|---|---|---|
| 1 | ನೆಫ್ಟ್ | 08/04/13 | 73610.00 |
| 2 | –"– | 08/04/13 | 79920.00 |
| 3 | –"– | 08/04/13 | 78758.00 |
| 4 | ನೆಫ್ಟ್ | 08/04/13 | 76850.00 |
| 5 | 324501 | 10/04/13 | 80038.00 |
| 6 | ನೆಫ್ಟ್ | 12/04/13 | 76850.00 |
| 7 | ನೆಫ್ಟ್ | 12/04/13 | 71532.00 |
| 8 | ನೆಫ್ಟ್ | 12/04/13 | 64771.00 |
| 9 | ನೆಫ್ಟ್ | 12/04/13 | 75650.00 |
| 10 | ನೆಫ್ಟ್ | 16/04/13 | 70000.00 |
| 11 | ನೆಫ್ಟ್ | 25/04/13 | 97481.00 |
| 12 | 324508 | 29/06/13 | 5000.00 |
| 13 | ನೆಫ್ಟ್ | 23/07/13 | 50000.00 |
| 14 | 324510 | 27/08/13 | 5000.00 |
| 15 | 324511 | 29/08/13 | 5000.00 |
| 16 | 324512 | 31/08/13 | 5100.00 |
| 17 | 326410 | 08/10/13 | 50150.00 |
| 18 | ನೆಫ್ಟ್ | 11/10/13 | 94150.00 |
| 19 | ನೆಫ್ಟ್ | 11/10/13 | 82701.00 |
| 20 | ನೆಫ್ಟ್ | 11/10/13 | 98750.00 |
| 21 | ನೆಫ್ಟ್ | 11/10/13 | 80483.00 |
| 22 | 326405 | 18/10/13 | 21150.00 |
| 23 | 326404 | 18/10/13 | 82600.00 |
| 24 | 326406 | 25/10/13 | 76050.00 |
| 25 | 326407 | 26/10/13 | 27035.00 |
| 26 | 326408 | 26/10/13 | 95414.00 |
| 27 | 326417 | 28/10/13 | 4995.00 |
| 28 | 326418 | 30/10/13 | 4995.00 |
| 29 | 326409 | 07/11/13 | 62000.00 |
| 30 | 326416 | 08/11/13 | 4995.00 |
| 31 | 326420 | 10/01/14 | 70000.00 |
| 32 | 327649 | 30/01/14 | 30000.00 |
| 33 | 327643 | 30/01/14 | 98600.00 |

BD/81/18

(357)



| | | | |
|---|---|---|---|
| 34 | 327642 | 30/01/14 | 99550.00 |
| 35 | 327645 | 30/01/14 | 37780.00 |
| 36 | 327647 | 30/01/14 | 15000.00 |
| **ಒಟ್ಟು ಮೊತ್ತ** | | | 2051958.00 |

2) ಮೇಲೆ ಹೇಳಿದ ಖರ್ಚುಗಳಿಗೆ ಸಂಬಂಧಪಟ್ಟಂತೆ ಈ ಕೆಳಕಂಡ ದಾಖಲೆಗಳು ಲಭ್ಯವಿದೆ ಮತ್ತು ಸದರಿ ಖರ್ಚುಗಳಲ್ಲಿನ ನ್ಯೂನತೆಗಳು ಈ ಕೆಳಗಿನಂತಿವೆ –

1. **ಕ್ರಮ ಸಂಖ್ಯೆ:1ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ಟ್ರೇಡರ್ಸ್‌ನ ದಿ:18/11/2012ರ ಬಿಲ್ ಸಂಖ್ಯೆ:801 ಮೊತ್ತ ₹33,992/–, ದಿ:22/11/12ರ ಬಿಲ್ ಸಂಖ್ಯೆ:803 ಮೊತ್ತ ₹22,802/– ಮತ್ತು ದಿ:26/11/12ರ ಬಿಲ್ ಸಂಖ್ಯೆ:804 ಮೊತ್ತ ₹16,816/–, ಒಟ್ಟು ₹73,610/–;
2. **ಕ್ರಮ ಸಂಖ್ಯೆ:2ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ಟ್ರೇಡರ್ಸ್‌ನ ದಿ:28/11/2012ರ ಬಿಲ್ ಸಂಖ್ಯೆ:806 ಮೊತ್ತ ₹11,129/–, ದಿ:30/11/12ರ ಬಿಲ್ ಸಂಖ್ಯೆ:807 ಮೊತ್ತ ₹38,402/– ಮತ್ತು ದಿ:03/12/12ರ ಬಿಲ್ ಸಂಖ್ಯೆ:808 ಮೊತ್ತ ₹30,389/–, ಒಟ್ಟು ₹79,920/–;
3. **ಕ್ರಮ ಸಂಖ್ಯೆ:3ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ಟ್ರೇಡರ್ಸ್‌ನ ದಿ:09/12/2012ರ ಬಿಲ್ ಸಂಖ್ಯೆ:810 ಮೊತ್ತ ₹7,269/–, ದಿ:11/12/12ರ ಬಿಲ್ ಸಂಖ್ಯೆ:811 ಮೊತ್ತ ₹24,555/– ಮತ್ತು ದಿ:14/12/12ರ ಬಿಲ್ ಸಂಖ್ಯೆ:812 ಮೊತ್ತ ₹46,934/–, ಒಟ್ಟು ₹78,758/–;
4. **ಕ್ರಮ ಸಂಖ್ಯೆ:4ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ಟ್ರೇಡರ್ಸ್‌ನ ದಿ:17/12/2012ರ ಬಿಲ್ ಸಂಖ್ಯೆ:814 ಮೊತ್ತ ₹27,799/–, ದಿ:19/12/12ರ ಬಿಲ್ ಸಂಖ್ಯೆ:815 ಮೊತ್ತ ₹14,764/– ಮತ್ತು ದಿ:22/12/12ರ ಬಿಲ್ ಸಂಖ್ಯೆ:816 ಮೊತ್ತ ₹34,287/–, ಒಟ್ಟು ₹76,850/–;
5. **ಕ್ರಮ ಸಂಖ್ಯೆ:5ರ ಖರ್ಚು** – ಸಂದೀಪ್ ಎಲೆಕ್ಟ್ರಿಕಲ್ & ಎಂಟರ್‌ಪ್ರೈಸಸ್‌ನ ದಿ:06/02/2013ರ ಬಿಲ್ ಸಂಖ್ಯೆ:522 ಮೊತ್ತ ₹13,190/–, ದಿ:10/02/13ರ ಬಿಲ್ ಸಂಖ್ಯೆ:529 ಮೊತ್ತ ₹29,092/–, ದಿ:12/02/13ರ ಬಿಲ್ ಸಂಖ್ಯೆ:535 ಮೊತ್ತ ₹10,908/–, ದಿ:16/02/13ರ ಬಿಲ್ ಸಂಖ್ಯೆ:542 ಮೊತ್ತ ₹13,725/–, ದಿ:19/02/13ರ ಬಿಲ್ ಸಂಖ್ಯೆ:548 ಮೊತ್ತ ₹9,205/– ಮತ್ತು ದಿ:22/02/13ರ ಬಿಲ್ ಸಂಖ್ಯೆ:553 ಮೊತ್ತ ₹3,918/–, ಒಟ್ಟು ₹80,038/–;
6. **ಕ್ರಮ ಸಂಖ್ಯೆ:6ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ಟ್ರೇಡರ್ಸ್‌ನ ದಿ:25/12/2012ರ ಬಿಲ್ ಸಂಖ್ಯೆ:817 ಮೊತ್ತ ₹35,342/–, ದಿ:27/12/12ರ ಬಿಲ್ ಸಂಖ್ಯೆ:818 ಮೊತ್ತ ₹35,442/– ಮತ್ತು ದಿ:29/12/12ರ ಬಿಲ್ ಸಂಖ್ಯೆ:820 ಮೊತ್ತ ₹6,066/–, ಒಟ್ಟು ₹76,850/–;
7. **ಕ್ರಮ ಸಂಖ್ಯೆ:7ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ಟ್ರೇಡರ್ಸ್‌ನ ದಿ:02/01/2013ರ ಬಿಲ್ ಸಂಖ್ಯೆ:822 ಮೊತ್ತ ₹34,670/– ಮತ್ತು ದಿ:05/01/13ರ ಬಿಲ್ ಸಂಖ್ಯೆ:823 ಮೊತ್ತ ₹36,862/–, ಒಟ್ಟು ₹71,532/–;

(358)



8. **ಕ್ರಮ ಸಂಖ್ಯೆ:8ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ಟ್ರೇಡರ್ಸ್‌ನ ದಿ:07/01/2013ರ ಬಿಲ್ ಸಂಖ್ಯೆ:824 ಮೊತ್ತ ₹28,548/– ಮತ್ತು ದಿ:09/01/13ರ ಬಿಲ್ ಸಂಖ್ಯೆ:825 ಮೊತ್ತ ₹36,223/–, ಒಟ್ಟು ₹64,771/–;
9. **ಕ್ರಮ ಸಂಖ್ಯೆ:9ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ಟ್ರೇಡರ್ಸ್‌ನ ದಿ:12/01/2013ರ ಬಿಲ್ ಸಂಖ್ಯೆ:827 ಮೊತ್ತ ₹36,455/– ಮತ್ತು ದಿ:14/01/13ರ ಬಿಲ್ ಸಂಖ್ಯೆ:828 ಮೊತ್ತ ₹39,195/–, ಒಟ್ಟು ₹75,650/–.
   ಮೇಲಿನ ಖರ್ಚುಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳು, ಪೈಪ್, ಕಾಲರ್ಸ್, ಕೇಬಲ್, ವೈರ್ ಮತ್ತು ಇತರೆ ಸಾಮಗ್ರಿಗಳ ಖರೀದಿಗೆ ಸದರಿ ಖರ್ಚನ್ನು ಮಾಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;
10. **ಕ್ರಮ ಸಂಖ್ಯೆ:10ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ರಿವೈಂಡಿಂಗ್ ವರ್ಕ್ಸ್‌ನ ದಿ:12/02/2013ರ ಬಿಲ್ ಸಂಖ್ಯೆ:118 ಮೊತ್ತ ₹19,100/–, ದಿ:16/02/13ರ ಬಿಲ್ ಸಂಖ್ಯೆ:130 ಮೊತ್ತ ₹21,800/–, ದಿ:12/02/13ರ ಬಿಲ್ ಸಂಖ್ಯೆ:119 ಮೊತ್ತ ₹21,500/– ಮತ್ತು ದಿ:05/01/13ರ ಬಿಲ್ ಸಂಖ್ಯೆ:117 ಮೊತ್ತ ₹8,500/–, ಒಟ್ಟು ₹70,900/–. ಶ್ರೀ.ವಿ.ಶ್ರೀನಿವಾಸ್ ರವರಿಗೆ ನೀಡಿರುವುದು ಎಂದು ನಗದು ವಹಿಯಲ್ಲಿ ಹೇಳಿದೆ;
11. **ಕ್ರಮ ಸಂಖ್ಯೆ:11ರ ಖರ್ಚು** – ಯಾವುದೇ ದಾಖಲೆಗಳಿಲ್ಲ. ಸದರಿ ಖರ್ಚು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳು ಮತ್ತು ಇತರೆ ಸಾಮಗ್ರಿಗಳ ಖರೀದಿ ಬಾಬ್ತು ಸಂತೋಷ್ ಎಲೆಕ್ಟ್ರಿಕಲ್ಸ್, ಶ್ರೀನಿವಾಸಪುರ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;
12. **ಕ್ರಮ ಸಂಖ್ಯೆ:12ರ ಖರ್ಚು** – ಚೌಡೇಶ್ವರಿ ಇಂಜಿನಿಯರಿಂಗ್ ವರ್ಕ್ಸ್‌ನ ದಿ:24/08/2012ರ ಬಿಲ್ ಸಂಖ್ಯೆ:193 ಮೊತ್ತ ₹4,950/– ಮತ್ತು ದಿ:20/12/12ರ ಬಿಲ್ ಸಂಖ್ಯೆ:198 ಮೊತ್ತ ₹1,200/–, ಒಟ್ಟು ₹6,150/–. ಪಂಪ್ ಮತ್ತು ಮೆಷಿನ್ ರಿಪೇರಿಗೆ ಶ್ರೀ.ಆನಂದ ರೆಡ್ಡಿ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;
13. **ಕ್ರಮ ಸಂಖ್ಯೆ:13ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ಟ್ರೇಡರ್ಸ್‌ನ ದಿ:16/01/2013ರ ಬಿಲ್ ಸಂಖ್ಯೆ:830 ಮೊತ್ತ ₹33,601/– ಮತ್ತು ದಿ:19/01/13ರ ಬಿಲ್ ಸಂಖ್ಯೆ:832 ಮೊತ್ತ ₹16,399/–, ಒಟ್ಟು ₹50,000/–. ಸದರಿ ಖರ್ಚುಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳು, ಪೈಪ್, ಕಾಲರ್ಸ್, ಕೇಬಲ್, ವೈರ್ ಮತ್ತು ಇತರೆ ಸಾಮಗ್ರಿಗಳ ಖರೀದಿಗೆ ಸದರಿ ಖರ್ಚನ್ನು ಮಾಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;
14. **ಕ್ರಮ ಸಂಖ್ಯೆ:14ರ ಖರ್ಚು** – ಶ್ರೀ.ವಿ.ಮುನಿಯಪ್ಪ ರವರು ನೀಡಿದ್ದಾರೆನ್ನಲಾದ ದಿ:27/08/13ರ ಹಣ ಸಂದಾಯ ರಸೀದಿ ಇದೆ. ಎಸ್‌ಸಿ\ಎಸ್‌ಟಿ ಡಿಎಸ್‌ಎಸ್ ಸಮಾವೇಶಕ್ಕೆ ಬಾಡಿಗೆ ಮತ್ತು ಶ್ರೀ.ವಿ.ಮುನಿಯಪ್ಪ ರವರಿಗೆ ಸಹಾಯ ಧನ ನೀಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;

ಆ೦/81/18

3೬9



15. **ಕ್ರಮ ಸಂಖ್ಯೆ:15ರ ಖರ್ಚು** – ಶ್ರೀ.ವಿ.ಮುನಿಯಪ್ಪ ರವರು ನೀಡಿದ್ದಾರೆನ್ನಲಾದ ದಿ:29/08/13ರ ಹಣ ಸಂದಾಯ ರಸೀದಿ ಇದೆ. ಎಸ್‌ಸಿ\ಎಸ್‌ಟಿ ಡಿಎಸ್‌ಎಸ್ ಸಮಾವೇಶಕ್ಕೆ ಬಾಡಿಗೆ ಮತ್ತು ಶ್ರೀ.ವಿ.ಮುನಿಯಪ್ಪ ರವರಿಗೆ ಸಹಾಯ ಧನ ನೀಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ. ಹಣ ಪಡೆದವರ ಸಹಿ ರಸೀದಿಯಲ್ಲಿ ಇಲ್ಲ;

16. **ಕ್ರಮ ಸಂಖ್ಯೆ:16ರ ಖರ್ಚು** – ಬೀಡಿಗಾನಪಲ್ಲಿ ಗ್ರಾಮದಲ್ಲಿ ಪೈಪ್‌ಲೈನ್ ದುರಸ್ತಿ ಕಾರ್ಯಕ್ಕೆ ಆದ ಖರ್ಚಿನ ಬಾಬ್ತು ಎಂದು ಶ್ರೀ.ಎಸ್.ಚಂದ್ರನ್ ರವರು ನೀಡಿದ್ದಾರೆನ್ನಲಾದ ದಿ:31/08/13ರ ಹಣ ಸಂದಾಯ ರಸೀದಿ ಇದೆ. ಅದೇ ಕಾರಣವನ್ನೂ ನಗದು ವಹಿಯಲ್ಲಿ ಹೇಳಿದೆ. ಹಣ ಪಡೆದವರ ಸಹಿ ರಸೀದಿಯಲ್ಲಿ ಇಲ್ಲ. ಸದರಿ ಹಣವನ್ನು ಶ್ರೀ.ಎಸ್.ಚಂದ್ರನ್ ರವರಿಗೆ ನಗದಾಗಿ ನೀಡಿದೆ;

17. **ಕ್ರಮ ಸಂಖ್ಯೆ:17ರ ಖರ್ಚು** – ಚೌಡೇಶ್ವರಿ ಇಂಜಿನಿಯರಿಂಗ್ ವರ್ಕ್ಸ್‌ನ ದಿ:06/06/2013ರ ಬಿಲ್ ಸಂಖ್ಯೆ:201 ಮೊತ್ತ ₹16,440/–, ದಿ:05/06/13ರ ಬಿಲ್ ಸಂಖ್ಯೆ:203 ಮೊತ್ತ ₹12,000/–, ದಿ:03/04/13ರ ಬಿಲ್ ಸಂಖ್ಯೆ:204 ಮೊತ್ತ ₹19,300/– ಮತ್ತು ದಿ:05/03/13ರ ಬಿಲ್ ಸಂಖ್ಯೆ:305 ಮೊತ್ತ ₹3,000/–, ಒಟ್ಟು ₹50,740/–. ಪಂಪ್ ಮತ್ತು ಮೆಷಿನ್ ರಿಪೇರಿಗೆ ಶ್ರೀ.ಆನಂದ ರೆಡ್ಡಿ ರವರಿಗೆ ನೀಡಿರುವುದು ಎಂದು ನಗದು ವಹಿಯಲ್ಲಿ ಹೇಳಿದೆ;

18. **ಕ್ರಮ ಸಂಖ್ಯೆ:18ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ಟ್ರೇಡರ್ಸ್‌ನ ದಿ:06/02/2013ರ ಬಿಲ್ ಸಂಖ್ಯೆ:851 ಮೊತ್ತ ₹35,659/–, ದಿ:06/02/2013ರ ಬಿಲ್ ಸಂಖ್ಯೆ:852 ಮೊತ್ತ ₹41,250/– ಮತ್ತು ದಿ:08/02/13ರ ಬಿಲ್ ಸಂಖ್ಯೆ:853 ಮೊತ್ತ ₹17,241/–, ಒಟ್ಟು ₹94,150/–. ಸದರಿ ಖರ್ಚುಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳು, ಪೈಪ್, ಕಾಲರ್ಸ್, ಕೇಬಲ್, ವೈರ್ ಮತ್ತು ಇತರೆ ಸಾಮಗ್ರಿಗಳ ಖರೀದಿಗೆ ಸದರಿ ಖರ್ಚನ್ನು ಮಾಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;

19. **ಕ್ರಮ ಸಂಖ್ಯೆ:19ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ಟ್ರೇಡರ್ಸ್‌ನ ದಿ:24/02/2015ರ ಬಿಲ್ ಸಂಖ್ಯೆ:1407 ಮೊತ್ತ ₹4,327/–, ದಿ:25/02/2013ರ ಬಿಲ್ ಸಂಖ್ಯೆ:1408 ಮೊತ್ತ ₹8,335/–, ದಿ:16/03/17ರ ಬಿಲ್ ಸಂಖ್ಯೆ:2066 ಮೊತ್ತ ₹33,010/–, ದಿ:05/04/17ರ ಬಿಲ್ ಸಂಖ್ಯೆ:2083 ಮೊತ್ತ ₹10,083/– ಮತ್ತು ದಿ:10/05/17 ಬಿಲ್ ಸಂಖ್ಯೆ:46 ಮೊತ್ತ ₹17,118/– ಹಾಗೂ ಮಂಗಳೂರು ಬ್ಯಾಗ್ ವರ್ಕ್ಸ್‌ನ ದಿ:12/04/12ರ ಬಿಲ್ ಸಂಖ್ಯೆ:2315 ₹520/–, ಒಟ್ಟು ₹73,393/–. ಒಟ್ಟು 6 ಬಿಲ್‌ಗಳ ಪೈಕಿ, 3 ಬಿಲ್ಲುಗಳು 2017ನೇ ಸಾಲಿನದ್ದಾಗಿದ್ದು, 2013ರಲ್ಲಿ ಚೆಕ್ ಅನ್ನು ನೀಡಿದೆ. ಸದರಿ ಖರ್ಚುಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳು, ಪೈಪ್, ಕಾಲರ್ಸ್, ಕೇಬಲ್, ವೈರ್ ಮತ್ತು ಇತರೆ ಸಾಮಗ್ರಿಗಳ ಖರೀದಿಗೆ ಸದರಿ ಖರ್ಚನ್ನು ಮಾಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;

20. **ಕ್ರಮ ಸಂಖ್ಯೆ:20ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ಟ್ರೇಡರ್ಸ್‌ನ ದಿ:05/10/2012ರ ಬಿಲ್ ಸಂಖ್ಯೆ:2246 ಮೊತ್ತ ₹49,206/– ಮತ್ತು ದಿ:17/04/12ರ ಬಿಲ್ ಸಂಖ್ಯೆ:1186 ಮೊತ್ತ ₹51,115/–, ಒಟ್ಟು ₹1,00,321/–. ಸದರಿ ಖರ್ಚುಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ

360



ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳು, ಪೈಪ್, ಕಾಲರ್ಸ್, ಕೇಬಲ್, ವೈರ್ ಮತ್ತು ಇತರೆ ಸಾಮಗ್ರಿಗಳ ಖರೀದಿಗೆ ಸದರಿ ಖರ್ಚನ್ನು ಮಾಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;

21. **ಕ್ರಮ ಸಂಖ್ಯೆ:21ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ಟ್ರೇಡರ್ಸ್‌ನ ದಿ:27/02/2015ರ ಬಿಲ್ ಸಂಖ್ಯೆ:1410 ಮೊತ್ತ ₹4,426/–, ದಿ:05/03/2017ರ ಬಿಲ್ ಸಂಖ್ಯೆ:1119 ಮೊತ್ತ ₹44,373/– ಮತ್ತು ದಿ:08/04/17ರ ಬಿಲ್ ಸಂಖ್ಯೆ:1167 ಮೊತ್ತ ₹40,361/–, ಒಟ್ಟು ₹89,160/–. ಸದರಿ ಖರ್ಚುಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳು, ಪೈಪ್, ಕಾಲರ್ಸ್, ಕೇಬಲ್, ವೈರ್ ಮತ್ತು ಇತರೆ ಸಾಮಗ್ರಿಗಳ ಖರೀದಿಗೆ ಸದರಿ ಖರ್ಚನ್ನು ಮಾಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;

22. **ಕ್ರಮ ಸಂಖ್ಯೆ:22ರ ಖರ್ಚು** – ಶ್ರೀ ವೆಂಕಟೇಶ್ವರ ರೂರಲ್ ಇಂಜಿನಿಯರಿಂಗ್ ವರ್ಕ್ಸ್‌ನ ದಿ:07/07/2013ರ ಬಿಲ್ ಸಂಖ್ಯೆ:20 ಮೊತ್ತ ₹12,200/– ಮತ್ತು ದಿ:15/08/13ರ ಬಿಲ್ ಸಂಖ್ಯೆ:21 ಮೊತ್ತ ₹9,200/–, ಒಟ್ಟು ₹21,400/–. ಸದರಿ ಖರ್ಚುಗಳು ಗ್ರಾಮಗಳಲ್ಲಿ ಕಿರು ನೀರು ಸರಬರಾಜಿನ ಪಂಪ್ ಮತ್ತು ಮೋಟರ್ ರಿಪೇರಿಗೆ ಶ್ರೀ.ಟಿ.ಎಂ.ಸೋಮಶೇಖರ ರೆಡ್ಡಿ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;

23. **ಕ್ರಮ ಸಂಖ್ಯೆ:23ರ ಖರ್ಚು** – ಶ್ರೀ ವೆಂಕಟೇಶ್ವರ ರೂರಲ್ ಇಂಜಿನಿಯರಿಂಗ್ ವರ್ಕ್ಸ್‌ನ ದಿ:01/01/2013ರ ಬಿಲ್ ಸಂಖ್ಯೆ:01 ಮೊತ್ತ ₹20,800/–, ದಿ:18/01/2013ರ ಬಿಲ್ ಸಂಖ್ಯೆ:16 ಮೊತ್ತ ₹17,300/–, ದಿ:15/07/13ರ ಬಿಲ್ ಸಂಖ್ಯೆ:17 ಮೊತ್ತ ₹16,500/– ಮತ್ತು ದಿ:18/07/13ರ ಬಿಲ್ ಸಂಖ್ಯೆ:19 ಮೊತ್ತ ₹28,500/–, ಒಟ್ಟು ₹83,100/–. ಸದರಿ ಖರ್ಚುಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಪಂಪ್ ಮತ್ತು ಮೋಟಾರ್ ದುರಸ್ತಿ ಹಾಗೂ ರಿವೈಂಡಿಂಗ್ ಇತ್ಯಾದಿಗೆ ಸದರಿ ಖರ್ಚನ್ನು ಮಾಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;

24. **ಕ್ರಮ ಸಂಖ್ಯೆ:24ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ರಿವೈಂಡಿಂಗ್ ವರ್ಕ್ಸ್‌ನ ದಿ:20/08/2013ರ ಬಿಲ್ ಸಂಖ್ಯೆ:116 ಮೊತ್ತ ₹21,100/–, ದಿ:18/03/2013ರ ಬಿಲ್ ಸಂಖ್ಯೆ:126 ಮೊತ್ತ ₹21,500/–, ದಿ:15/08/13ರ ಬಿಲ್ ಸಂಖ್ಯೆ:124 ಮೊತ್ತ ₹21,500/– ಮತ್ತು ದಿ:16/03/13ರ ಬಿಲ್ ಸಂಖ್ಯೆ:121 ಮೊತ್ತ ₹9,000/–, ಒಟ್ಟು ₹73,100/–. ಬಿಲ್ಲಿನ ಮೊತ್ತಕ್ಕಿಂತ ₹2,950/–ನ್ನು ಹೆಚ್ಚಿಗೆ ನೀಡಿದೆ. ಶ್ರೀನಿವಾಸ ರಿವೈಂಡಿಂಗ್ ವರ್ಕ್ಸ್ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;

25. **ಕ್ರಮ ಸಂಖ್ಯೆ:25ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ರಿವೈಂಡಿಂಗ್ ವರ್ಕ್ಸ್‌ನ ದಿ:25/04/2013ರ ಬಿಲ್ ಸಂಖ್ಯೆ:110 ಮೊತ್ತ ₹16,300/–, ದಿ:04/04/2013ರ ಬಿಲ್ ಸಂಖ್ಯೆ:111 (ಒಟ್ಟು ಮೊತ್ತ ಇಲ್ಲ). ಶ್ರೀನಿವಾಸ ರಿವೈಂಡಿಂಗ್ ವರ್ಕ್ಸ್ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;

26. **ಕ್ರಮ ಸಂಖ್ಯೆ:26ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ರಿವೈಂಡಿಂಗ್ ವರ್ಕ್ಸ್‌ನ ದಿ:24/05/2013ರ ಬಿಲ್ ಸಂಖ್ಯೆ:115 ಮೊತ್ತ ₹41,200/–, ದಿ:18/12/2012ರ ಬಿಲ್

30/81/15

361



ಸಂಖ್ಯೆ:114 ಮೊತ್ತ ₹14,500/–, ದಿ:18/02/13ರ ಬಿಲ್ ಸಂಖ್ಯೆ:113 ಮೊತ್ತ ₹20,100/– ಮತ್ತು ದಿ:04/02/13ರ ಬಿಲ್ ಸಂಖ್ಯೆ:112 ಮೊತ್ತ ₹19,500/–, ಒಟ್ಟು ₹95,300/–. ಸದರಿ ಖರ್ಚುಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಪಂಪ್ ಮತ್ತು ಮೋಟಾರ್ ದುರಸ್ತಿ ಹಾಗೂ ರಿವೈಂಡಿಂಗ್ ಇತ್ಯಾದಿ ಶ್ರೀನಿವಾಸ ರಿವೈಂಡಿಂಗ್ ವರ್ಕ್ಸ್ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;

27. **ಕ್ರಮ ಸಂಖ್ಯೆ:27ರ ಖರ್ಚು** – ಶ್ರೀ.ಸುಬ್ಬರಾಯಪ್ಪ ಬಿನ್ ಮುನಿಶಾಮಪ್ಪ ರವರಿಗೆ ನೀಡಿದ ಹಣದ ಬಾಬ್ತು ಸದರಿಯವರು ನೀಡಿದ್ದಾರೆಂದು ಹೇಳಿದ ದಿ:20/10/13ರ ಹಣ ಸಂದಾಯ ರಸೀದಿ ಇದೆ. ಅಂಗವಿಕಲರ ಶೇ.3ರ ವೆಚ್ಚದಲ್ಲಿ ಸಹಾಯಧನ ನೀಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ. ಹಣ ಪಡೆದವರ ಸಹಿ ರಸೀದಿಯಲ್ಲಿ ಇಲ್ಲ;

28. **ಕ್ರಮ ಸಂಖ್ಯೆ:28ರ ಖರ್ಚು** – ಶ್ರೀ.ಕೆ.ಎನ್.ಬಾಬುರೆಡ್ಡಿ ಬಿನ್ ನಾರಾಯಣ ರೆಡ್ಡಿ ರವರಿಗೆ ನೀಡಿದ ಹಣದ ಬಾಬ್ತು ಸದರಿಯವರು ನೀಡಿದ್ದಾರೆಂದು ಹೇಳಿದ ದಿ:30/10/13ರ ಹಣ ಸಂದಾಯ ರಸೀದಿ ಇದೆ. ಅಂಗವಿಕಲರ ಶೇ.3ರ ವೆಚ್ಚದಲ್ಲಿ ಸಹಾಯಧನ ನೀಡಿರುವುದು ಎಂದು ನಗದು ವಹಿಯಲ್ಲಿ ಹೇಳಿದೆ. ಹಣ ಪಡೆದವರ ಸಹಿ ರಸೀದಿಯಲ್ಲಿ ಇಲ್ಲ;

29. **ಕ್ರಮ ಸಂಖ್ಯೆ:29ರ ಖರ್ಚು** – ಶ್ರೀ ಬೀರೇಶ್ವರ ಇಂಜಿನಿಯರಿಂಗ್ ವರ್ಕ್ಸ್‌ನ ದಿನಾಂಕ ನಮೂದಿರದ ಬಿಲ್ ಸಂಖ್ಯೆ:205 ಮೊತ್ತ ₹7,710/–, ದಿ:12/11/2012ರ ಬಿಲ್ ಸಂಖ್ಯೆ:211 ಮೊತ್ತ ₹7,685/–, ದಿ:10/10/12ರ ಬಿಲ್ ಸಂಖ್ಯೆ:204 ಮೊತ್ತ ₹7,685/–, ದಿ:29/09/12ರ ಬಿಲ್ ಸಂಖ್ಯೆ:202 ಮೊತ್ತ ₹5,847/–, ದಿ:08/11/12ರ ಬಿಲ್ ಸಂಖ್ಯೆ:209 ಮೊತ್ತ ₹5,847/, ದಿ:20/10/12ರ ಬಿಲ್ ಸಂಖ್ಯೆ:208 ಮೊತ್ತ ₹3,200/–, ದಿ:30/09/12ರ ಬಿಲ್ ಸಂಖ್ಯೆ:206 ಮೊತ್ತ ₹3,500/–, ದಿ:10/10/12ರ ಬಿಲ್ ಸಂಖ್ಯೆ:214 ಮೊತ್ತ ₹4,500/–, ದಿ:11/11/12ರ ಬಿಲ್ ಸಂಖ್ಯೆ:210 ಮೊತ್ತ ₹7,540/–, ದಿ:05/10/12ರ ಬಿಲ್ ಸಂಖ್ಯೆ:203 ಮೊತ್ತ ₹7,540/– ಮತ್ತು ದಿ:15/11/12ರ ಬಿಲ್ ಸಂಖ್ಯೆ:212 ಮೊತ್ತ ₹7,710/–, ಒಟ್ಟು ₹68,764/–. ಸದರಿ ಖರ್ಚುಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಪಂಪ್ ಮತ್ತು ಮೋಟಾರ್ ದುರಸ್ತಿಗೆ ಶ್ರೀ.ಎಸ್.ವಿ.ರಾಮಕೃಷ್ಣಪ್ಪ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;

30. **ಕ್ರಮ ಸಂಖ್ಯೆ:30ರ ಖರ್ಚು** – ಶ್ರೀ.ಶಂಕರಪ್ಪ ರವರಿಗೆ ನೀಡಿದ ಹಣದ ಬಾಬ್ತು ಸದರಿಯವರು ನೀಡಿದ್ದಾರೆಂದು ಹೇಳಿದ ದಿ:08/11/13ರ ಹಣ ಸಂದಾಯ ರಸೀದಿ ಇದೆ. ಅಂಗವಿಕಲರ ಶೇ.3ರ ವೆಚ್ಚದಲ್ಲಿ ಸಹಾಯಧನ ನೀಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ. ಹಣ ಪಡೆದವರ ಸಹಿ ರಸೀದಿಯಲ್ಲಿ ಇಲ್ಲ;

31. **ಕ್ರಮ ಸಂಖ್ಯೆ:31ರ ಖರ್ಚು** – ಶ್ರೀ ಸೀತಿ ಬೈರವೇಶ್ವರ ಟ್ರೇಡರ್ಸ್‌ನ ದಿ:23/02/2013ರ ಬಿಲ್ ಸಂಖ್ಯೆ:871 ಮೊತ್ತ ₹36,719/– ಮತ್ತು ದಿ:25/02/2013ರ ಬಿಲ್ ಸಂಖ್ಯೆ:872 ಮೊತ್ತ ₹34,281/–, ಒಟ್ಟು ₹71,000/–. ಸದರಿ ಖರ್ಚುಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳು, ಪೈಪ್, ಕಾಲರ್ಸ್, ಕೇಬಲ್, ವೈರ್ ಮತ್ತು ಇತರೆ ಸಾಮಗ್ರಿಗಳ ಖರೀದಿಗೆ ಸದರಿ ಖರ್ಚನ್ನು ಮಾಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;

362



32. **ಕ್ರಮ ಸಂಖ್ಯೆ:32ರ ಖರ್ಚು** – ಯಾವುದೇ ದಾಖಲೆಯಿಲ್ಲ. ಪಂಪ್ ಮತ್ತು ಮೋಟಾರ್ ರಿಪೇರಿಗೆ ಶ್ರೀ.ಚಲಪತಿ ರವರಿಗೆ ನೀಡಿದೆಯೆಂದು ನಗದು ವಹಿಯಲ್ಲಿ ನಮೂದಿಸಿದೆ. ಸದರಿ ಮೊತ್ತವನ್ನು ಸದರಿಯವರಿಗೆ ನಗದಾಗಿ ನೀಡಿದೆಯೆಂದು ಬ್ಯಾಂಕ್ ತಃಖ್ತೆಯಲ್ಲಿ ಕಂಡು ಬಂದಿದೆ;
33. **ಕ್ರಮ ಸಂಖ್ಯೆ:33ರ ಖರ್ಚು** – ಸಂದೀಪ್ ಎಲೆಕ್ಟ್ರಿಕಲ್ & ಎಂಟರ್‌ಪ್ರೈಸಸ್‌ನ ದಿ:05/01/2014ರ ಬಿಲ್ ಸಂಖ್ಯೆ:570 ಮೊತ್ತ ₹2,996/–, ದಿ:08/01/14ರ ಬಿಲ್ ಸಂಖ್ಯೆ:575 ಮೊತ್ತ ₹18,484/–, ದಿ:11/01/14ರ ಬಿಲ್ ಸಂಖ್ಯೆ:579 ಮೊತ್ತ ₹8,908/–, ದಿ:15/01/14ರ ಬಿಲ್ ಸಂಖ್ಯೆ:585 ಮೊತ್ತ ₹19,053/–, ದಿ:17/01/14ರ ಬಿಲ್ ಸಂಖ್ಯೆ:589 ಮೊತ್ತ ₹11,162/–, ದಿ:22/01/14ರ ಬಿಲ್ ಸಂಖ್ಯೆ:596 ಮೊತ್ತ ₹10,562/– ಮತ್ತು ದಿ:26/01/15ರ ಬಿಲ್ ಸಂಖ್ಯೆ:600 ಮೊತ್ತ ₹8,335/–, ಒಟ್ಟು ₹79,500/–. ಸದರಿ ಖರ್ಚುಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳು, ಪೈಪ್, ಕಾಲರ್ಸ್, ಗಮ್, ಪ್ಯಾನೆಲ್ ಬೋರ್ಡ್, ಕೇಬಲ್ ವೈರ್ ಮತ್ತು ಇತರೆ ಸಾಮಗ್ರಿಗಳ ಖರೀದಿಗೆ ಸದರಿ ಖರ್ಚನ್ನು ಮಾಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;
34. **ಕ್ರಮ ಸಂಖ್ಯೆ:34ರ ಖರ್ಚು** – ಸಂದೀಪ್ ಎಲೆಕ್ಟ್ರಿಕಲ್ & ಎಂಟರ್‌ಪ್ರೈಸಸ್‌ನ ದಿ:02/11/2013ರ ಬಿಲ್ ಸಂಖ್ಯೆ:502 ಮೊತ್ತ ₹16,648/–, ದಿ:07/11/13ರ ಬಿಲ್ ಸಂಖ್ಯೆ:505 ಮೊತ್ತ ₹11,427/–, ದಿ:10/11/13ರ ಬಿಲ್ ಸಂಖ್ಯೆ:508 ಮೊತ್ತ ₹10,608/–, ದಿ:12/11/13ರ ಬಿಲ್ ಸಂಖ್ಯೆ:511 ಮೊತ್ತ ₹8,044/–, ದಿ:13/11/13ರ ಬಿಲ್ ಸಂಖ್ಯೆ:514 ಮೊತ್ತ ₹13,577/–, ದಿ:16/11/13ರ ಬಿಲ್ ಸಂಖ್ಯೆ:517 ಮೊತ್ತ ₹3,988/–, ದಿ:19/11/13ರ ಬಿಲ್ ಸಂಖ್ಯೆ:520 ಮೊತ್ತ ₹19,032/–, ದಿ:22/11/13ರ ಬಿಲ್ ಸಂಖ್ಯೆ:525 ಮೊತ್ತ ₹3,835/– ಮತ್ತು ದಿ:26/11/13ರ ಬಿಲ್ ಸಂಖ್ಯೆ:528 ಮೊತ್ತ ₹12,591/–, ಒಟ್ಟು ₹99,750/–. ಸದರಿ ಖರ್ಚುಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳು, ಪೈಪ್, ಕಾಲರ್ಸ್, ಗಮ್, ಪ್ಯಾನೆಲ್ ಬೋರ್ಡ್, ಕೇಬಲ್ ವೈರ್ ಮತ್ತು ಇತರೆ ಸಾಮಗ್ರಿಗಳ ಖರೀದಿಗೆ ಸದರಿ ಖರ್ಚನ್ನು ಮಾಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;
35. **ಕ್ರಮ ಸಂಖ್ಯೆ:35ರ ಖರ್ಚು** – ಸಂದೀಪ್ ಎಲೆಕ್ಟ್ರಿಕಲ್ & ಎಂಟರ್‌ಪ್ರೈಸಸ್‌ನ ದಿನಾಂಕ ನಮೂದಿರದ ಬಿಲ್ ಸಂಖ್ಯೆ:679 ಮೊತ್ತ ₹18,905/– ಮತ್ತು ದಿನಾಂಕ ನಮೂದಿರದ ಬಿಲ್ ಸಂಖ್ಯೆ:681 ಮೊತ್ತ ₹18,875/–, ಒಟ್ಟು ₹37,780/–. ಸದರಿ ಖರ್ಚುಗಳು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳ ಖರೀದಿಗೆ ಸದರಿ ಖರ್ಚನ್ನು ಮಾಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;
36. **ಕ್ರಮ ಸಂಖ್ಯೆ:36ರ ಖರ್ಚು** – ಸಂದೀಪ್ ಎಲೆಕ್ಟ್ರಿಕಲ್ & ಎಂಟರ್‌ಪ್ರೈಸಸ್‌ನ ದಿನಾಂಕ:28/11/12ರ ಬಿಲ್ ಸಂಖ್ಯೆ:163 ಮೊತ್ತ ₹15,202/–. ಸದರಿ ಖರ್ಚು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳ ಖರೀದಿಗೆ ಸದರಿ ಖರ್ಚನ್ನು ಮಾಡಿದೆಯೆಂದು ನಗದು ವಹಿಯಲ್ಲಿ ಹೇಳಿದೆ;

BD/81/18

363



3) ಕ್ರಮ ಸಂಖ್ಯೆ–14 ಮತ್ತು 15ರ ಖರ್ಚುಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾರೆನ್ನಲಾದ ಶ್ರೀ.ವಿ.ಮುನಿಯಪ್ಪ ರವರಿಗೆ ಸಹಾಯ ಧನ ನೀಡಿರುವುದು ಮತ್ತು ಡಿಎಸ್‌ಎಸ್ ಸಮಾವೇಶಕ್ಕೆ ಬಾಡಿಗೆ ಬಾಬ್ತು ಆಗಿದೆಯೆಂದು ನಗದು ವಹಿಯಲ್ಲಿ ಕಂಡು ಬಂದಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಧಾರ್ಮಿಕ ಸಭೆ, ಸಮಾರಂಭ, ಕಾರ್ಯಕ್ರಮಗಳಿಗೆ ಹಾಗೂ ಇನ್ನಿತರೆ ಯಾವುದೇ ಧಾರ್ಮಿಕ ಚಟುವಟಿಕೆಗಳಿಗೆ ಗ್ರಾಮ ಪಂಚಾಯತ್‌ನ ನಿಧಿಯಿಂದ ಅನುದಾನವನ್ನು ಬಳಸುವಂತಿಲ್ಲವೆಂದು ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 440 ಗ್ರಾಪಂಅ 2015 ದಿನಾಂಕ:22/07/15ರಲ್ಲಿ ನಿರ್ದಿಷ್ಟವಾಗಿ ಹೇಳಿರುವುದರಿಂದ, ಸದರಿ ಖರ್ಚು ಕಾನೂನುಬಾಹಿರವಾಗಿದೆ. ಈ ಮೊದಲೇ ಹೇಳಿದಂತೆ ಸದರಿ ಶ್ರೀ.ವಿ.ಮುನಿಯಪ್ಪ ರವರು ಹಣವನ್ನು ಸ್ವೀಕರಿಸಿದ್ದಾರೆಂಬ ಬಗ್ಗೆ ನೀಡಿದ ಸ್ವೀಕೃತಿಯಲ್ಲಿ ಸದರಿಯವರ ಸಹಿ ಇಲ್ಲ. ಕಾರಣ, ಒಟ್ಟು ₹10,000/– ಮೊತ್ತ ದುರುಪಯೋಗ ಆಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

4) ಕ್ರಮ ಸಂಖ್ಯೆ–27, 28 ಮತ್ತು 30ರ ಖರ್ಚುಗಳ ಬಾಬ್ತು ಹಣವನ್ನು ಕ್ರಮವಾಗಿ, ಅಂಗವಿಕಲರು ಎಂದು ಹೇಳಲಾದ ಶ್ರೀ.ಸುಬ್ಬರಾಯಪ್ಪ ಬಿನ್ ಮುನಿಶಾಮಪ್ಪ, ಶ್ರೀ.ಕೆ.ಎನ್.ಬಾಬುರೆಡ್ಡಿ ಮತ್ತು ಶ್ರೀ.ಶಂಕರಪ್ಪ ರವರಿಗೆ ಸಹಾಯ ಧನ ನೀಡಿದ ಬಾಬ್ತು ಎಂದು ಹೇಳಿದ್ದು, ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 440 ಗ್ರಾಪಂಅ 2015 ದಿನಾಂಕ:03/09/15ರಲ್ಲಿ ಅಂಗವಿಕಲರ ಕಲ್ಯಾಣಕ್ಕಾಗಿ ಗ್ರಾಮ ಪಂಚಾಯತ್ ಸ್ವಂತ ಅನುದಾನವನ್ನು ವಿನಿಯೋಗಿಸುವ ಬಗ್ಗೆ ಅವಕಾಶವಿದ್ದರೂ, ಸದರಿ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ವಯ ಸದರಿ ಖರ್ಚುಗಳಿಗೆ ಸಂಬಂಧಪಟ್ಟಂತೆ ಆಯಾಯ ಫಲಾನುಭವಿಗಳು ನೀಡಿದ್ದಾರೆನ್ನಲಾದ ಸಹಿ ಇರದ ರಸೀದಿಗಳನ್ನು ಹೊರತುಪಡಿಸಿ ಇನ್ನಾವುದೇ ದಾಖಲೆಗಳು ಇಲ್ಲದಿರುವುದರಿಂದ, ಸದರಿ ಖರ್ಚು ಕಾನೂನುಬಾಹಿರವಾಗಿದೆ ಮತ್ತು ಸದರಿ ಮೊತ್ತ ₹14,985/– ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

5) ಇನ್ನುಳಿದಂತೆ ಕ್ರಮ ಸಂಖ್ಯೆ–1 ರಿಂದ 13, 16 ರಿಂದ 26, 29, 31 ರಿಂದ 36ರ ಖರ್ಚುಗಳು \ ಖರೀದಿಗೆ ಸಂಬಂಧಿಸಿದಂತೆ ಆಹ್ವಾನಿಸಿದ ದರ ಪಟ್ಟಿ ಮತ್ತು ವೋಚರ್ ಇಲ್ಲ. ಕೆಎಫ್‌ಸಿ ಪರಿಚ್ಛೇದ 17 ಮತ್ತು 57 ಹಾಗೂ ಸಾಧಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55(49)(ಎ) ಗಳನ್ನು ಪಾಲಿಸದೇ ಇರುವುದರಿಂದ, ಸದರಿ ಖರೀದಿ \ ಖರ್ಚು ನಿಯಮಬಾಹಿರವಾಗಿದೆ;

6) ₹1 ಲಕ್ಷ ಮೀರಿದ ಖರೀದಿಗೆ ಕೆಟಿಪಿಪಿ ಕಾಯಿದೆ ಅನ್ವಯವಾಗುತ್ತದೆ. ಸದರಿ ಕಾಯಿದೆಯ ನಿಯಮಾವಳಿಗಳಿಂದ ತಪ್ಪಿಸಿಕೊಳ್ಳಲು ಸದರಿ ಕ್ರಮ ಸಂಖ್ಯೆ–1 ರಿಂದ 13, 16 ರಿಂದ 26, 29, 31 ರಿಂದ 36ರ ಖರ್ಚುಗಳನ್ನು ಬೇರೆ ಬೇರೆ ದಿನಾಂಕಗಳಂದು ಮಾಡಿರುವಂತೆ ಸದರಿ ಬಿಲ್ಲುಗಳನ್ನು ತಯಾರಿಸಿರುವುದು ಸಂಬಂಧಿಸಿದ ಬಿಲ್ಲುಗಳನ್ನು ಪರಿಶೀಲಿಸಿದಾಗ ಕಂಡು ಬಂದಿದೆ;

7) ಕ್ರಮ ಸಂಖ್ಯೆ–1 ರಿಂದ 13, 16 ರಿಂದ 26, 29, 31 ರಿಂದ 35ರ ಖರ್ಚುಗಳಿಗೆ ಸಂಬಂಧಿಸಿದಂತೆ, ಒಂದಕ್ಕಿಂತ ಹೆಚ್ಚಿನ ರಸೀದಿಗಳಿದ್ದು, ಸದರಿ ಆಯಾಯ ರಸೀದಿಗಳಿಗೆ ಒಂದೇ ಚೆಕ್ ಅನ್ನು ನೀಡಿದೆ;

364



8) ಮುಂದುವರೆದು, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಡ್ಜೆಟ್) ನಿಯಮಾವಳಿಗಳು, 2006ರ ನಿಯಮ 43ರನ್ವಯ ಪ್ರತಿ ಖರ್ಚಿಗೆ ಸಂಬಂಧಿಸಿದಂತೆ ಬಿಲ್ ಅಥವಾ ವೋಚರ್‌ಗಳು ಇರಬೇಕೆನ್ನುವುದು ಕಡ್ಡಾಯವಾಗಿದೆ. ಆದರೆ, ಸದರಿ ಖರ್ಚುಗಳಿಗೆ ಸಂಬಂಧಿಸಿದ ವೋಚರ್‌ಗಳು ಲಭ್ಯವಿಲ್ಲ. ಸದರಿ ಚೆಕ್‌ಗಳನ್ನು ಆಯಾಯ ವ್ಯಕ್ತಿ \ ಸಂಸ್ಥೆ ಹೆಸರಿಗೆ ನೀಡಿದ ಬಗ್ಗೆ ಸ್ವೀಕೃತಿಯನ್ನು ಪಡೆದ ಬಗ್ಗೆ ದಾಖಲೆಯಿಲ್ಲ. ಕಾರಣ, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಡ್ಜೆಟ್) ನಿಯಮಾವಳಿಗಳು, 2006ರ ನಿಯಮಗಳು ಮತ್ತು ಕರ್ನಾಟಕ ಆರ್ಥಿಕ ಸಂಹಿತೆ ನಿಯಮಗಳು ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

9) ಕ್ರಮ ಸಂಖ್ಯೆ–1 ರಿಂದ 13, 16 ರಿಂದ 26, 29, 31 ರಿಂದ 35ರ ಬಿಲ್ಲುಗಳಲ್ಲಿ ಮಾರಾಟ ತೆರಿಗೆ ಮತ್ತು ಆದಾಯ ತೆರಿಗೆಯನ್ನು ಕಟಾಯಿಸಿ, ಆಯಾಯ ಇಲಾಖೆಯ ಲೆಕ್ಕ ಶೀರ್ಷಿಕೆಗೆ ಮೊತ್ತವನ್ನು ಜಮಾ ಮಾಡಿದ ದಾಖಲೆಗಳಿಲ್ಲ;

10) ಮೇಲೆ ಹೇಳಿದ ಎಲ್ಲಾ ಖರ್ಚುಗಳ ಅವಧಿಯಲ್ಲಿ 2ನೇ ಎದುರುದಾರರು ನೆಲವಂಕಿ ಗ್ರಾಮ ಪಂಚಾಯತ್‌ನಲ್ಲಿ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. 3 ರಿಂದ 6ನೇ ಎದುರುದಾರರುಗಳು ಸದರಿ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದ್ದು, ಸದರಿಯವರುಗಳು ಕ್ರಮವಾಗಿ, ಮೇಲಿನ ಉಪ ಖಂಡಿಕೆ–1ರ ಕ್ರಮ ಸಂಖ್ಯೆ:1 ರಿಂದ 11, 12 ರಿಂದ 21, 22 ರಿಂದ 30 ಮತ್ತು 31 ರಿಂದ 36ರಲ್ಲಿನ ಖರ್ಚುಗಳಿಗೆ ಜವಾಬ್ದಾರರಾಗಿದ್ದಾರೆ.

11. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 2 ರಿಂದ 6ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

12. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 2 ರಿಂದ 6ನೇ ಎದುರುದಾರರುಗಳು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ದೂರಿನ 1ನೇ ಎದುರುದಾರರು ಸದರಿ ಖರ್ಚುಗಳ ಅವಧಿಯಲ್ಲಿ ಕರ್ತವ್ಯ ನಿರ್ವಹಿಸದೇ ಇರುವುದರಿಂದ, 1ನೇ ಎದುರುದಾರರ ವಿರುದ್ಧದ ನಡವಳಿಯನ್ನು ಬಿಟ್ಟಿದೆ.

BD/81/18

365



14. ಎರಡನೇ (2ನೇ) ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿರುವುದರಿಂದ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಸದರಿಯವರಿಂದ ದುರುಪಯೋಗದ ಮೊತ್ತವನ್ನು ವಸೂಲಿ ಮಾಡಲು ಸಕ್ಷಮ ಪ್ರಾಧಿಕಾರಕ್ಕೆ ನಿರ್ದೇಶಿಸಿದೆ.

15. ಅದಲ್ಲದೆ, 3 ರಿಂದ 6ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 3 ರಿಂದ 6ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

16. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 5/8

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**

5/8/08